**ಇಂದು ದಿನಾಂಕ 06.11.2025 ರಂದು ಪಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

**3.** ಸರ್ವೆ ನಂ.2 ಮತ್ತು 15 ಕ್ಕೆ ಮತ್ತು ಎರಡು ಸೈಟ್‌ಗೆ ದಾವೆ ಹಾಕಿದ್ದೇವೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಏನು ದಾಖಲೆ ಕೊಟ್ಟಿದ್ದೀರ ಎಂದರೆ ಗೊತ್ತಿಲ್ಲ. ನನ್ನ ತಾತ ಆವಲಪ್ಪ. ಅವರು ನನ್ನ ತಂದೆಯ ತಂದೆ. ದಾವಾ ಆಸ್ತಿ ಮೂಲತಃ ನನ್ನ ತಾತನ ಆಸ್ತಿ ನನ್ನ ತಂದೆ ಮೃತರಾದ ಕಾರಣ ನನ್ನ ತಾಯಿಗೆ ಬಂದಿತ್ತು. ದಾವಾ ಆಸ್ತಿ ನನ್ನ ತಾತನಿಗೆ ಬಂದಿದೆ ಎಂದು ದಾಖಲೆ ನೋಡಿದ್ದೇನೆ. ಸದರಿ ದಾಖಲೆಯನ್ನು ಹಾಜರು ಮಾಡಲು ತೊಂದರೆ ಇಲ್ಲ ಎನ್ನುತ್ತಾರೆ. ನಾನು ಹೇಳುವ ರೀತಿ ದಾವಾ ಆಸ್ತಿ ನನ್ನ ತಂದೆ ಮತ್ತು ನನ್ನ ತಾತನಿಗೆ ಸೇರಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಅಣ್ಣ ಸ್ವಯಾರ್ಜಿತವಾಗಿ ದುಡಿದು ಗಳಿಸಿದ್ದಾರೆ ಎಂದರೆ ಸರಿಯಲ್ಲ. ಆದ ಕಾರಣ ನಾನು ಯಾವುದೇ ಮೂಲ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಖಾನೇಷುಮಾರಿ ಆಸ್ತಿಗಳು ಸಹ ನನ್ನ ಅಣ್ಣನಿಗೆ ಸರ್ಕಾರದಿಂದ ಗ್ರ್ಯಾಂಟ್ ಆಗಿದೆ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಹುಟ್ಟಿದಾಗಿನಿಂದಲೂ ಅಂಗವಿಕಲ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಜ್ವರ ಬಂದ ಕಾರಣ ಅಂಗವಿಕಲತೆ ಉಂಟಾಗಿದೆ. ಈಗಲೂ ಸಹ ನನ್ನ ಅಣ್ಣ ಅಂಗವಿಕಲ ಆಗಿದ್ದು ಅದನ್ನು ಮರೆಮಾಚಿ ನಾನು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ಅಣ್ಣನ ಸ್ವಯಾರ್ಜಿತ ಆಸ್ತಿಗಳು ಆದ ಕಾರಣ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**

**ದೇವನಹಳ್ಳಿ.**